ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಕೇಸುಗಳ ಇತ್ಯರ್ಥದ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 72 (430)

ಶ್ರೀ ವೈ ರಾಮಕೃಷ್ಣ (ಆನೇಕಲ್)

ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ರಾಜ್ಯದ ವಿವಿಧ ಕೋರ್ಟುಗಳಲ್ಲಿ ಬಾಕಿ ಇರುವ ಕೇಸುಗಳ ಸಂಖ್ಯೆ ಎಷ್ಟು (ಮುನ್ಸಿಫ್ ಮ್ಯಾಜಿಸ್ಟ್ರೇಟ್ ಕೋರ್ಟುಗಳಿಂದ ರಾಜ್ಯದ ಹೈಕೋರ್ಟಿನವರೆವಿಗೂ.)

ಆ) ರಾಜ್ಯದಲ್ಲಿರುವ ಕುಟುಂಬ ವ್ಯವಹಾರಗಳನ್ನು ತೀರ್ಮಾನಿಸುವ ಕೋರ್ಟುಗಳ ಸಂಖ್ಯೆ ಎಷ್ಟು? (ಫ್ಯಾಮಿಲಿ ಕೋರ್ಟ್ಸ್) ಮತ್ತು ಅವುಗಳ ಮುಂದಿರುವ ಕೇಸುಗಳ ಸಂಖ್ಯೆ ಎಷ್ಟು.

ಇ) ಕಾರ್ಮಿಕರಿಗೆ ಸಂಬಂಧಪಟ್ಟ ವ್ಯಾಜ್ಯಗಳ ತೀರ್ಮಾನಕ್ಕೋಸ್ಕರ ಇರುವ ಕೋರ್ಟುಗಳಿಗೆ ಕಳುಹಿಸಿಕೊಟ್ಟಿರುವ ನ್ಯಾಯಾಧೀಶರ ಸಂಖ್ಯೆ ಎಷ್ಟು ಇನ್ನೆಷ್ಟು ನ್ಯಾಯಾಧೀಶರುಬೇಕೆಂದು ಕೇಳಲಾಗಿದೆ; ಕಳುಹಿಸದಿರಲು ಕಾರಣವೇನು?

ಈ) ರಾಜ್ಯದ ವಿವಿಧ ಕೋರ್ಟುಗಳು ಪೂರ್ಣವಾಗಿ ಕೆಲಸ ಮಾಡಲು ಯಾವಯಾವ ಕೋರ್ಟಿಗೆ ಎಷ್ಟೆಷ್ಟು ನ್ಯಾಯಾಧೀಶರು ಬೇಕು; ಅವುಗಳನ್ನು ಭರ್ತಿ ಮಾಡದಿರಲು ಕಾರಣವೇನು;

ಎಂ.ಸಿ. ನಾಣಯ್ಯ

(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು.)

ಅ) ದಿನಾಂಕ 1-1-1995ರಂದು ಇದ್ದಂತೆ

ಮುನ್ಸಿಫ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯಗಳಲ್ಲ	7,03,579
ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯಗಳಲ್ಲಿ	2,73,254
ಜಿಲ್ಲಾ ನ್ಯಾಯಾಲಯಗಳಲ್ಲಿ	1,99,050
ಉಚ್ಚ ನ್ಯಾಯಾಲಯದಲ್ಲಿ	1,51,566
ಒಟ್ಟು	13,27,449

ಆ) ಒಟ್ಟು 4 ಕುಟುಂಬ ನ್ಯಾಯಾಲಯಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಅವುಗಳ ಮುಂದೆ ಬಾಕಿ ಇರುವ ಕೇಸುಗಳ ಸಂಖ್ಯೆ:

1.	ಪ್ರಿನ್ಸಿಪಾಲ್ ನ್ಯಾಯಾಧೀಶರು, ಕುಟುಂಬ ನ್ಯಾಯಾಲಯ, ಬೆಂಗಳೂರು	1,990
2.	ಹೆಚ್ಚುವರಿ ನ್ಯಾಯಾಧೀಶರು, ಕುಟುಂಬ ನ್ಯಾಯಾಲಯ, ಬೆಂಗಳೂರು	2,271

3.	ನ್ಯಾಯಾಧೀಶರು, ಕುಟುಂಬ ನ್ಯಾಯಾಲಯ, ಬೆಳಗಾಂ.	137
4.	ನ್ಯಾಯಾಧೀಶರು, ಕುಟುಂಬ ನ್ಯಾಯಾಲಯ, ಬಿಜಾಪುರ	551
	ಒಟ್ಟು	4,949

ಇ) 12
4

ನ್ಯಾಯಾಧೀಶರ ಕೊರತೆಯಿಂದಾಗಿ ಈ ಹುದ್ದೆಗಳನ್ನು ಭರ್ತಿ ಮಾಡಿರುವುದಿಲ್ಲ.

ಈ) ವಿವರಗಳನ್ನು ಅನುಬಂಧದಲ್ಲಿ ನಮೂದಿಸಲಾಗಿದೆ. ನ್ಯಾಯಾಧೀಶರುಗಳ ಕೊರತೆಯಿಂದ ಈ ಹುದ್ದೆಗಳನ್ನು ಭರ್ತಿ ಮಾಡಿರುವುದಿಲ್ಲ.

ANNEXURE

DETAILS REGARDING THE NUMBER OR VACANT POSTS OF JUDGES

Sl.No.	Name of the Vacant post	From when Vacant
	DISTRICT JUDGES	
1.	XVIII Addl. City Civil & Sessions Judge, Bangalore	14.12.94
2.	XIX Addl. City Civil & Sessions Judge, Bangalore.	24.12.94
3.	Dist. & Sessions Judge, Bangalore Rural District, Bangalore.	30.11.94
4.	Dist. & Sessions Judge, Belgaum	08.01.95
5.	II Addl. Dist & Sessions Judge, Gulbarga	27.10.94
6.	Addl. Dist. & Session Judge, Hassan	03.01.95
7.	Dist. & SSessions Judge, Mysore	30.11.94
8.	Dist. Judge, Leave Reserve, High Court of Karnataka, Bangalore.	24.12.94
9.	Dist. Judge, Leave Reserve, High Court of Karnataka, Bangalore.	23.12.94

10. Member, Karnataka Appllate Tribunal, Bangalore.	29.05.89
11. Addl. Registrar, Karnataka Lokayukta, Bangalore	31.12.94
12. Presiding officer, Labour Court, Bangalore	01.01.95
13. Presiding Officer, III Addl. Labour Court, Bangalore	31.12.94
14. Presiding Officer, Labour Court, Mysore	03.11.94
15. Addl. Secy & Legal Advisor, Legal Ce11, Karnataka Bhavan, New Delhi.	27.09.94
16. Presiding Officer, Central Govt. Indl. Tribunal-Cum-Labour Court, Bangalore.	01.11.94
17. Registrar, Karnataka Administrative Tribunal, Bangalore.	05.08.93

CIVIL JUDGES

1. Civil Judge, Leave Reserve, High Court of Karnataka, Bangalore.	04.09.92
2. Civil Judge, Leave Reserve, High Court of Karnataka, Bangalore.	24.11.94
3. Deputy Registrar, Karnataka Administrative Tribunal, Bangalore. 20.09.94	

MUNSIFFS

1. Metroplitan Magistrate, Mobile Traffic Court, Bangalore City

2. Under Secy. to Govt., Law Dept, Vidhana(*)
   Soudha, Bangalore 01.06.93

3. Under Secy. to Govt., Law Dept, Vidhana(*)
   Soudha, Bangalore. 01.06.93

(*) to be filled up by posting of a Munsiff.

ಶ್ರೀ ವೈ ರಾಮಕೃಷ್ಣ:- ಮಾನ್ಯ ಅಧ್ಯಕ್ಷರೆ, ಕೋರ್ಟ್ಗಿನಲ್ಲಿ 13,27,449 ಕೇಸ್ಗಳು ಬಾಕಿ ಇದೆ ಎಂದು ಹೇಳಿದ್ದೀರಿ. ಇದರ ಪೈಕಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟ್ ಒಂದರಲ್ಲಿ 7,03,570 ಕೇಸ್ಗಳು ಇದೆ ಎಂದು ಹೇಳಿದ್ದೀರಿ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಇರುವಂತಹ ಕೇಸ್ಗಳು ಕಡಿಮೆ ಮಾಡುವುದಕ್ಕೋಸ್ಕರ ನಮ್ಮಲ್ಲಿ ನ್ಯಾಯಾಧೀಶರ ಕೊರತೆ ಇರುವುದರಿಂದ ಹುದ್ದೆಗಳನ್ನು ಭರ್ತಿ ಮಾಡಿರಲ್ಲಲ್ಲವೆಂದು ಹೇಳಿದ್ದೀರಿ. ಇದಕ್ಕೆ ನನ್ನ ಒಂದು ಸಜೇಷನ್ ಇದೆ. ಡಿಗ್ರಿಯಾದ ಮೇಲೆ 4 ವರ್ಷಗಳನ್ನು ಪ್ರಿಸ್ಕ್ರೈಬ್ ಎಂದು ಮಾಡುವುದಕ್ಕಿಂತ ಅದನ್ನು ಮೂರು ವರ್ಷಕ್ಕೆ ಕಡಿಮೆ ಮಾಡಿದರೆ ಮುನ್ಸೀಫ್ ಮ್ಯಾಜಿಸ್ಟ್ರೇಟ್ರಾಗುತ್ತಾರೆ. 1,51,566 ಕೇಸುಗಳು ಹೈಕೋರ್ಟ್ನಲ್ಲಿ ಬಾಕಿ ಇದೆ ಎಂದು ಹೇಳಿದ್ದೀರಿ. ತಾವು ನೋಡಿರಬಹುದು. ಸುಪ್ರೀಂ ಕೋರ್ಟಿನಲ್ಲೂ ಕೂಡ ಅರ್ಧ ಗಂಟೆಗಳ ಕಾಲ ಹೆಚ್ಚಿಗೆ ಕುಳಿತು ಕೆಲಸ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ.

ಅದೇರೀತಿ ತಾವು ಮುಖ್ಯ ನ್ಯಾಯಾಧೀಶರನ್ನು ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಸಾಧ್ಯವೆ?

ಶ್ರೀ ಎಂ. ಸಿ. ನಾಣಯ್ಯ:- ಮಾನ್ಯ ಸಭಾಧ್ಯಕ್ಷರೆ, ಮುನ್ಸೀಫ್ ಹುದ್ದೆಗಳಂತು ಖಾಲೀ ಇಲ್ಲ, ಎಲ್ಲಾ ಮುನ್ಸೀಫ್ ಹುದ್ದೆಗಳನ್ನು ತುಂಬಿದ್ದೇವೆ, 50 ಮುನ್ಸೀಫ್, 50 ಮುನ್ಸೀಫ್ ಹುದ್ದೆಗಳನ್ನು ನಾವು - ಈಗಾಗಲೇ ಭರ್ತಿ ಮಾಡಿದ್ದೇವೆ. ಎಲ್ಲಿ ಮುನ್ಸೀಫ್ ಹುದ್ದೆಗಳು ಖಾಲೀ ಇವೆ ಅಲ್ಲಿ ಇರತಕ್ಕಂಥ Eligibility ಯನ್ನು ಅದು ನಾಲ್ಕು ವರ್ಷದಿಂದ ಮೂರು ವರ್ಷಗಳಿಗೆ ಇಳಿಸಬೇಕು ಎನ್ನತಕ್ಕಂಥ ನಿಮ್ಮ ಸಲಹೆ ಏನಿದೆ ಇದಕ್ಕೆ ಅದು ಉದ್ಭವಿಸುವುದಿಲ್ಲ. ಮತ್ತು ನಮ್ಮ ಪ್ರಕರಣಗಳೆಲ್ಲಾ ಕರ್ನಾಟಕದಲ್ಲಿ ಹೆಚ್ಚಾಗುತ್ತಿದೆ ಇದರ ಬಗ್ಗೆ ನಮ್ಮ ಸುಪ್ರೀಂಕೋರ್ಟ್ ನ್ಯಾಯಾಧೀಶರು ಮತ್ತು ಹೈಕೋರ್ಟ್ ನ್ಯಾಯಾಧೀಶರವರೇ ಒಂದು ನೀತಿ ನಿಯಮವನ್ನು ಮಾಡಿಕೊಂಡು ಇದನ್ನು ಕಡಿಮೆ ಮಾಡಬೇಕು ಎಂದು ತೀರ್ಮಾನ ಮಾಡಿದ್ದಾರೆ ಮತ್ತು ಇದರ ಬಗ್ಗೆ ತಾವು ಕೊಟ್ಟಿರತಕ್ಕ ಸಲಹೆಯನ್ನು ನಾನು ರಾಜ್ಯದ ಉಚ್ಚನ್ಯಾಯಾಲಯದ ನ್ಯಾಯಾಧೀಶರ ಜೊತೆಯಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವೈ. ರಾಮಕೃಷ್ಣ:- ಕೌಟುಂಬಿಕ ನ್ಯಾಯಲಯದ ವಿಚಾರದಲ್ಲಿ 4449 ಕೇಸುಗಳು ಇವೆ ಎಂದು ಹೇಳಿದ್ದೀರಿ, ಆ ಪೈಕಿ ದಕ್ಷಿಣ ಕನ್ನಡದ ಮಂಗಳೂರಿನಲ್ಲೆ 4261 ಕೇಸುಗಳು ಇವೆ. ತಾವು ಈ ಬೆಳಗಾವಿಯಲ್ಲಿ 131 ಕೇಸುಗಳಿಗೆ ಒಬ್ಬರೆ ನ್ಯಾಯಾಧೀಶರನ್ನು ಕೊಟ್ಟಿದ್ದೀರಿ. 2280

ಕೇಸುಗಳಿಗೂ ಒಬ್ಬಿರೆ ನ್ಯಾಯಾಧೀಶರನ್ನು ಕೊಟ್ಟಿದ್ದೀರಿ ಇದು ಅವೈಜ್ಞಾನಿಕ, ಮಾಡುವುದಕ್ಕೆ ಆಗುವುದಿಲ್ಲ. ಈ ದೊಡ್ಡ ಸಂಖ್ಯೆಯನ್ನು ತಾವು ಪರಿಗಣಿಸಿ 10 ಜನ ನ್ಯಾಯಾಧೀಶರನ್ನು ಈ ಕೌಟುಂಬಿಕ ನ್ಯಾಯಾಲಯಕ್ಕೆ ಕೊಡುವುದಕ್ಕೆ ಸಾಧ್ಯ ಇದೆಯೆ?

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಸಭಾಧ್ಯಕ್ಷರೆ, ಇವತ್ತಿಗೆ ಬೆಂಗಳೂರಿನಲ್ಲಿ ಎರಡು ನ್ಯಾಯಾಲಯಗಳಿವೆ. ಒಂದು ಕೋರ್ಟಿನ ನ್ಯಾಯಾಧೀಶರು ಡಿಸೆಂಬರ್ 94ರಲ್ಲಿ ರಾಜೀನಾಮೆ ಕೊಟ್ಟಮೇಲೆ ಅದನ್ನು ಇನ್ನೂ ನಾವು ತುಂಬಿರಲಿಕ್ಕೆ ಆಗಲಿಲ್ಲ. ನಾವು ಈಗಾಗಲೇ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಪತ್ರವನ್ನು ಬರೆದು, ಒಬ್ಬರನ್ನು ತುಂಬಬೇಕು ಎಂದು ಹೇಳಿದ್ದೇವೆ. ಇನ್ನು ಈ ಬೆಂಗಳೂರಿನಲ್ಲಿ ಈ ಪ್ರಕರಣಗಳು ಜಾಸ್ತಿ ಇವೆ, ನಾನೂ ಕೂಡ I do agree with the Hon'ble Member. ಆದ್ದರಿಂದ ಈ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡಲಿಕ್ಕೆ ಬೆಂಗಳೂರಿನಲ್ಲಿ ಇನ್ನೂ ಒಂದು ಕೌಟುಂಬಿಕ ನ್ಯಾಯಾಲಯವನ್ನು ತರುವುದಕ್ಕೋಸ್ಕರ ಈಗಾಗಲೇ ನಾನು ಸ್ಯಾಂಕ್ಷನ್ ಮಾಡಿದ್ದೇನೆ. ಅದನ್ನು ತುಂಬಲಿಕ್ಕೆ ಇರತಕ್ಕಂಥ ಕಾರ್ಯ ಕ್ರಮವನ್ನು ಕೈಗೊಂಡಿದ್ದೇವೆ.

ಶ್ರೀ. ವೈ. ರಾಮಕೃಷ್ಣ:- ಸ್ವಾಮಿ ತಾವು ನಾಲ್ಕು ಕಾರ್ಮಿಕ ಕೋರ್ಟುಗಳಲ್ಲಿ ಜಡ್ಜ್‌ಗಳು ಇಲ್ಲ ಎಂದು ಹೇಳಿದ್ದೀರಿ, ಯಾವಾಗ ಅವರಿಗೆ ಇಂಪೋಸ್ ಮಾಡುತ್ತೀರಿ? ಏಕೆಂದರೆ ಕಾರ್ಮಿಕರ ಹಿತ ಬಹಳ ಮುಖ್ಯವಾದುದು ಮತ್ತು ಈ 12 ಜನ ಈಗ ಹಾಜರಾತಿಯಲ್ಲಿ ಇದ್ದಾರೋ ಎಂದು ನಾನು ತಮ್ಮನ್ನು ಕೇಳುತ್ತೇನೆ?

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಸಭಾಧ್ಯಕ್ಷರೆ, 12 ಕಾರ್ಮಿಕ ನ್ಯಾಯಾಲಯಗಳಿವೆ, ಅದರಲ್ಲಿ ನಾಲ್ಕು ಹುದ್ದೆಗಳು ಖಾಲಿ ಇದೆ. ಸರ್ಕಾರದಿಂದ ಈಗಾಗಲೇ ಹೈಕೋರ್ಟಿಗೆ ಪತ್ರ ಬರೆದು ಜಿಲ್ಲಾ ನ್ಯಾಯಾಧೀಶರನ್ನು ನೇಮಿಸುವ ವ್ಯವಸ್ಥೆ ಮಾಡಬೇಕೆಂದು ಬರೆದಿದ್ದೇವೆ. ಅವರು ಅಲ್ಲಿಂದ ಕಳುಹಿಸಿದ ಕೂಡಲೇ ನಾವು ವ್ಯವಸ್ಥೆ ಮಾಡಬೇಕಾಗುತ್ತದೆ. ಆದ್ದರಿಂದ ರಾಜ್ಯ ಉಚ್ಚನ್ಯಾಯಾಲಯದ ನ್ಯಾಯಾಧೀಶರ ಜೊತೆ ಚರ್ಚೆ ಮಾಡಿದ್ದೇನೆ ಮತ್ತು ಇಂದೂ ಕೂಡ ಚರ್ಚೆಮಾಡುತ್ತೇನೆ.

+ ಶ್ರೀಮತಿ ಪ್ರಮಿಳಾ ಎನ್. ನೇಸರ್ಗಿ :- ಸನ್ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಕಾನೂನು ಮಂತ್ರಿಗಳು ಕೌಟುಂಬಿಕ ನ್ಯಾಯಾಲಯದ ಬಗ್ಗೆ ಮಾತನಾಡುತ್ತಾ ಡಿಸ್ಟ್ರಿಕ್ಟ್‌ಕೋರ್ಟುಗಳಿಗೆ ನ್ಯಾಯಾಧೀಶರನ್ನು ಹಾಕಬೇಕು ಎಂದು ಹೇಳಿದರು, ಸನ್ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದು ಅಧ್ಯಕ್ಷರೆ, ಫ್ಯಾಮಿಲಿ ಕೋರ್ಟ್ ಆಕ್ಟ್ ಅಂಥ ಒಂದು ಇದೆ. ಆ ಆಕ್ಟ್‌ನಲ್ಲಿ ರೆಗ್ಯುಲರ್ ಅಪಾಯಿಂಟ್ ಮಾಡುವಾಗ ಮಹಿಳೆಯವರಿಗೆ ಅದ್ಯತೆಯನ್ನು ಕೊಡಬೇಕು ಎಂದು ಇದೆ. ಆದರೆ ಇದುವರೆಗೂ ಕೂಡ ಕರ್ನಾಟಕದ ಯಾವ ಕೌಟಂಬಿಕ ನ್ಯಾಯಾಲಯದಲ್ಲೂ ಒಬ್ಬ ಮಹಿಳೆ ಇಲ್ಲ. ದಯವಿಟ್ಟು ತಾವು ತರಿಸಿನೋಡಬೇಕು. ಬೆಂಗಳೂರನಲ್ಲಿ ಖಾಲೀ ಇದೆ ಎಂಬುದು ಇದಕ್ಕೆ ಒಂದು ನಿದರ್ಶನ. ಮಾನ್ಯ ಸಭಾಧ್ಯಕ್ಷರೆ, ಕೌಟಂಬಿಕ ನ್ಯಾಯಾಲಯ ಇರುವುದು ಗುಂಪುಗಳ ಜಗಳಗಳನ್ನು ತೀರ್ಮಾನ ಮಾಡಲಿಕ್ಕೆ, ಹೆಣ್ಣುಮಕ್ಕಳು ತಮ್ಮ ಕಷ್ಟಸುಖಗಳನ್ನು ಗಂಡಸರ ಹತ್ತಿರ ಹೋಗಿ

ಹೇಳಿಕೊಳ್ಳುವುದಕ್ಕೆ ಆಗುತ್ತಿಲ್ಲ, ಆಗುವುದಿಲ್ಲ Three are personal matters which cannot be revealed to men.

ಈ ಕಾರಣದಿಂದ ತಾವು ರೂಲ್ಸ್ ಮಾಡುವಾಗ ಆ ರೂಲ್ಸ್‌ನಲ್ಲಿ ಮಹಿಳೆಯವರು ಇರಬೇಕು ಎಂದು ಒಂದು ಕಾನೂನು ತಂದಿದ್ದಾರೆ. ಆದರೆ ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದೇನೆಂದರೆ ಕೌಟಂಬಿಕ ನ್ಯಾಯಾಲಯದಲ್ಲಿ ಎಲ್ಲೂ ಮಹಿಳೆಯರನ್ನು ನೇಮಕಾತಿ ಮಾಡಿಲ್ಲ, ಜಿಲ್ಲಾ ನ್ಯಾಯಾಲಯಗಳಲ್ಲಿ ಖಾಲೀ ಇದೆ ಎಂದು ಹೇಳುತ್ತೀರಿ, ಕರ್ನಾಟಕದ ಜಿಲ್ಲಾ ನ್ಯಾಯಾಲಯಗಳಲ್ಲಿ ಇರುವುದು ಇಬ್ಬರೆ, ಅವರನ್ನು ಬಿಟ್ಟರೆ ಬೇರೆ ಇನ್ನು ಯಾರೂ ಇಲ್ಲವೆ ಇಲ್ಲ. ಇವತ್ತು ಸಹಾಸ್ತ್ರಾರು ಮಂದಿ ಮಹಿಳೆಯರಿದ್ದಾರೆ. ಈ ಕೌಟಂಬಿಕ ನ್ಯಾಯಾಲಯಗಳಿಗೆ ನ್ಯಾಯಾಧೀಶರನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಮಹಿಳೆಯರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಕಾನೂನು ಇದೆ. ನಾವೇನು ಭಿಕ್ಷೆ ಬೇಡುತ್ತಿಲ್ಲ, ದಯಮಾಡಿ ಕಾನೂನು ಪ್ರಕಾರ ತಾವು ಮಹಿಳೆಯನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೀರಾ? ಇದು ಮೊದಲನೆಯ ಪ್ರಶ್ನೆ, ಎರಡನೆಯದಾಗಿ ಮಾನ್ಯ ಅಧ್ಯಕ್ಷರೆ, ಇವತ್ತು ಇಡೀ ಭಾರತದೇಶದ ಹೈಕೋರ್ಟ್‌ಗಳಲ್ಲಿ ಮಹಿಳಾ ನ್ಯಾಯಾಧೀಶರಿದ್ದಾರೆ. ಅದರೆ ಎಕ್ಸ್‌ಪ್ಷನ್ ಅಂಥ ಅಂದರೆ ಕರ್ನಾಟಕ. ಕರ್ನಾಟಕದಲ್ಲಿ ಇವತ್ತು ಯಾವುದೇ ಹೈಕೋರ್ಟುಗಳಲ್ಲಿ ಮಹಿಳಾ ನ್ಯಾಯಾಧೀಶರು ಇಲ್ಲ ಶ್ರೀಮಾನ್ ನಂಜುಂಡರವರು ಮುಖ್ಯ ನ್ಯಾಯಾಧೀಶರಾದಾಗ ನಾನು ಮಹಿಳಾ ವಕೀಲೆಯಾಗಬೇಕು ಎಂದು ಹೋಗಿ ಕೇಳಿದಾಗ ಡೈರಕ್ಟ್ ರೆಕ್ರೂಟಿಮೆಂಟ್ ಮಾಡಿ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟರು. ಈಗ ಅವರು ಸುಪ್ರೀಂಕೋರ್ಟಿಗೆ ಹೋಗಿದ್ದಾರೆ ಈಗ ಇರತಕ್ಕಂಥ ನ್ಯಾಯಾಧೀಶರು ಮತ್ತು ಕಾನೂನು ಮಂತ್ರಿಗಳು ಸೇರಿ ಈಗ ಡೈರಕ್ಟ್ ರೆಕ್ರೂಟ್‌ಮೆಂಟ್ ಮಾಡಿ ಖಾಲೀ ಇರತಕ್ಕಂಥ ಹುದ್ದೆಗಳಿಗೆ ಕರ್ನಾಟಕದಲ್ಲಿ ಅಪವಾದ ಹೋಗುವುದಕ್ಕೋಸ್ಕರ ಮಹಿಳಾ ನ್ಯಾಯಾಧೀಶರನ್ನು ನೇಮಕ ಮಾಡುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ?

ಅಧ್ಯಕ್ಷರು :- ಅದಕ್ಕೆಲ್ಲ ಸಮಯವಿಲ್ಲ.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಸಭಾಧ್ಯಕ್ಷರೆ, ಈ ಕೌಟಂಬಿಕ ನ್ಯಾಯಾಲಯಕ್ಕೆ ಬರತಕ್ಕಂಥ ಪ್ರಕರಣಗಳಲ್ಲಿ ಹೆಂಗಸರೂ ಅರ್ಜಿಯನ್ನು ಹಾಕುತ್ತಾರೆ ಮತ್ತು ಗಂಡಸರೂ ಅರ್ಜಿಯನ್ನು ಹಾಕುತ್ತಾರೆ. ಅಲ್ಲಿ ಮಹಿಳೆಯರು ಹಾಕಿದಾಗ ಮಹನೀಯರು ಹಾಕುತ್ತಾರೆ, ಮಹನೀಯರು ಹಾಕಿದಾಗ ಮಹಿಳೆಯರು ಹಾಕುತ್ತಾರೆ. ಆದ್ದರಿಂದ ಎರಡು ಕೋರ್ಟುಗಳು ಇವೆ, ಆದರಲ್ಲಿ ಸಮತೋಲವನ್ನು ಕಾಪಾಡಬೇಕು. ಹೆಂಗಸರು ಇರಬೇಕು ಎಂದು ಹೇಳುತ್ತಿರುವ ವಾದವನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ನಾನು ಈಗಾಗಲೇ ಹೈಕೋರ್ಟಿಗೆ ಬರೆದಿರತಕ್ಕ ಪತ್ರದಲ್ಲಿ ಎರಡು ಜನ ಜಿಲ್ಲಾ ನ್ಯಾಯಾಧೀಶರಿದ್ದಾರೆ ಅವರಲ್ಲಿ ಯಾರಾದರೂ ಒಬ್ಬರನ್ನು ನೇಮಕ ಮಾಡಬೇಕೆಂದು ಈಗಾಗಲೇ ಪತ್ರವನ್ನು ಬರೆದಿದ್ದೇನೆ, ಬಹುಶಃ ಅದು ಹೈಕೋರ್ಟಿನ ವಿವೇಚನೆಗೆ ಬಿಟ್ಟಿದ್ದುದು ಮತ್ತು ಹೈಕೋಟಿನಲ್ಲಿ ಮಹಿಳಾ ನ್ಯಾಯಾಧೀಶರನ್ನು ನೇಮಕ ಮಾಡಬೇಕೆಂದು ಹೇಳಿದ್ದಾರೆ. ಮಾನ್ಯಸಭಾಪತಿಗಳೆ, ಇದು ನನ್ನ ವ್ಯಾಪ್ತಿಗೆ ಬರುವುದಿಲ್ಲ. ಇದು ಕರ್ನಾಟಕದ ಹೈಕೋರ್ಟಿನಲ್ಲಿಇರತಕ್ಕಂಥ ನ್ಯಾಯಾಧೀಶರು ಸೇರಿ ಈ ಕೆಲಸವನ್ನು

ಮಾಡಬೇಕು. ಬಹುಶಃ ಅಂತಹ ಒಂದು ಸಂದರ್ಭ ಬಂದಾಗ ಶ್ರೀಮತಿ ಪ್ರಮೀಳಾ ನೇಸರ್ಗಿ ಯವರೆ ಆ ಒಂದು ದೊಡ್ಡ ಹುದ್ದೆಯನ್ನು ಅಲಂಕರಿಸಿದ್ದೆ ಆದರೆ ಬಹಳ ಒಳ್ಳೆಯದು.

ಶ್ರೀಮತಿ ಪ್ರಮೀಳಾ ಎನ್. ನೇಸರ್ಗಿ:- ಮಾನ್ಯ ಸಭಾಧ್ಯಕ್ಷರೆ, ನನ್ನನ್ನು ಇಲ್ಲಿಂದ ದೂರಕ್ಕೆ ಹಾಕುವ ಪ್ರಯತ್ನ ಬೇಡ. ದಯವಿಟ್ಟು ನನ್ನನ್ನು ಇಲ್ಲಿಯೇ ಇರುವ ಹಾಗೆ ಮಾಡಿ. ಹತ್ತಾರು ಜನ ಆ ಜವಾಬ್ದಾರಿ ಕೆಲಸ ಮಾಡತಕ್ಕಂಥ ಅರ್ಹ ಮಹಿಳೆಯರು ಇದ್ದಾರೆ. ತಮ್ಮ ದೃಷ್ಟಿಯಲ್ಲಿ ನಾವು ಈಗ ಇರತಕ್ಕಂಥವರು ಪರ್ವ ನ್ಯಾಯಾಧೀಶರು Only Men can give justice

ಎನ್ನತಕ್ಕಂಥ ಕಾಲ ತಪ್ಪಿಹೋಗಬೇಕು. ಇವತ್ತು ತಾವು ಮಾಡಬೇಕು, ಇಡೀ ಭಾರತ ದೇಶದಲ್ಲಿ ಎಲ್ಲಾ ಕಡೆ ಮಾಡಿದ್ದಾರೆ ಕೇವಲ ಕರ್ನಾಟಕದಲ್ಲಿ ಮಾತ್ರ ಇಲ್ಲ. ಇದಕ್ಕೆ ಏನು ಕಾರಣ ಎಂಬುದನ್ನು ದಯವಿಟ್ಟು ತಾವು ತಿಳಿಸಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಸಭಾಧ್ಯಕ್ಷರೆ, ರಾಜ್ಯದ ಉಚ್ಚನ್ಯಾಯಾಲಯದವರು ನಮ್ಮ ಹೈಕೋರ್ಟಿಗೆ ಒಬ್ಬ ಮಹಿಳಾ ನ್ಯಾಯಾಧೀಶರನ್ನು ನೇಮಕ ಮಾಡಬೇಕು ಎಂದು ಹೇಳುತ್ತಾ ಇರತಕ್ಕಂಥ ಶಿಫಾರಸ್ಸು ನಮ್ಮ ಸರ್ಕಾರಕ್ಕೆ ಬಂದಾಗ ಖಂಡಿತವಾಗಿ ನಾವು ಆದನ್ನು ಪರಿಹರಿಸುತ್ತೇವೆ. ಆದರೆ ಈ ಒಂದು ಕಾರ್ಯಕ್ರಮವನ್ನು ಮಾಡಬೇಕಾದವರು ರಾಜ್ಯದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು.

ಶ್ರೀ. ಎಸ್. ಸುರೇಶ್ ಕುಮಾರ್ ಜನಸಾಮಾನ್ಯರಿಗೆ ನ್ಯಾಯಾಂಗ ವಾದದಲ್ಲಿ ವಿಶ್ವಾಸ, ನಿಷ್ಠೆ ಇರುವುದಕ್ಕೋಸ್ಕರ ಈ ಬಾಕಿ ಇರುವ ಕೇಸುಗಳನ್ನು, ಮುಂದೆ ಬರುವ ಕೇಸುಗಳನ್ನು ಬಹಳ ಬೇಗ ಇತ್ಯರ್ಥ ಮಾಡಲಿಕ್ಕೆ ಏನಾದರೂ ಕಾರ್ಯಕ್ರಮವನ್ನು ಕೈಗೊಂಡಿದ್ದೀರಾ?

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಸಭಾಧ್ಯಕ್ಷರೆ, ನಾನು ಒಂದು ಕಾರ್ಯಕ್ರಮವನ್ನು ಈಗಾಗಲೇ ನಿರೂಪಿಸಿಕೊಂಡಿದ್ದೇನೆ, ಐದು ವರ್ಷಕ್ಕೆ ಮೇಲ್ಪಟ್ಟು ಇರತಕ್ಕಂಥ ಮೊಕ್ಕದ್ದಮೆ ಕ್ರಿಮಿನಲ್ ಕೇಸಸ್‌ಗೆ ಸಂಬಂಧಪಟ್ಟ ಹಾಗೆ ನಮ್ಮ ಕರ್ನಾಟಕರಾಜ್ಯದ ವಿವಿಧ ನ್ಯಾಯಾಲಯ ಗಳಲ್ಲಿ ಇವೆ. ಇಂತಹ ಮೊಕದ್ದಮೆಗಳು ರಾಜ್ಯದ ಸಮಾಚಾರ ಮೇಲೆ ಯಾವುದೇ ಪರಿಣಾಮ ಆಗದೇ ಇರತಕ್ಕಂಥದ್ದು ಮತ್ತು ಚಿಕ್ಕ ಚಿಕ್ಕ ಪ್ರಕರಣಗಳು ನಿಲ್ಲತಕ್ಕಂಥದ್ದು ಮತ್ತು ಕೆಲವು ಸಂದರ್ಭದಲ್ಲಿ ಮುಖ್ಯವಾಗಿ ವಿಚಾರಣೆಗೆ ಸಂಬಂಧಪಟ್ಟವರು ಬರುವುದಿಲ್ಲ. ಈ ರೀತಿಯ ಹಲವಾರು ಕಾರಣಗಳಿಂದಾಗಿ ಈ ಒಂದು ಮೊಕದ್ದಮೆಗಳು ವರ್ಷಾನುಗಟ್ಟಲೆ ಹೋಗುತ್ತಾ ಇರತಕ್ಕಂಥದನ್ನು ನಾವು ಈಗಾಗಲೇ ಪಟ್ಟಿ ಮಾಡಿ, ಅದರ ಬಗ್ಗೆ ಸಚಿವಸಂಪುಟದ ಸಭೆಯನ್ನು ಕರೆದು ಅದನ್ನು ಇತ್ಯರ್ಥಗೊಳಿಸುವ ಕಾರ್ಯಕ್ರಮವನ್ನು ಹಾಕಿದ್ದೇವೆ. ಆ ಕೆಲಸ ನಡೆಯುತ್ತಿದೆ, ಆ ಕೆಲಸವನ್ನು ಮೂರು ತಿಂಗಳ ಒಳಗಡೆ ಮಾಡಿ ಮುಗಿಸಬೇಕೆಂಬ ಕಾರ್ಯಕ್ರಮವನ್ನೂ ಕೂಡ ಹಾಕಿಕೊಂಡಿದ್ದೇವೆ.

ಶ್ರೀ ಎಚ್.ಎನ್. ನಂಜೇಗೌಡ:- ಸಭಾಧ್ಯಕ್ಷರೆ, ಮಂತ್ರಿಗಳು ಒಂದು ಮಾತು ಹೇಳಿದರು, ಮಹಿಳೆಯರನ್ನು ನೇಮಕ ಮಾಡಬೇಕಾದರೆ ಉಚ್ಚನ್ಯಾಯಾಲಯದಿಂದ ಶಿಫಾರಸ್ಸು ಬಂದರೆ ಖಂಡಿತವಾಗಿಯೂ ನಾವು ಅದನ್ನು ಪರಿಶೀಲಿಸುತ್ತೇವೆ ಎಂದು ಹೇಳಿದರು. ಉಚ್ಚನ್ಯಾಯಾಲಯ ದವರು ಗಂಡಸರನ್ನೆ ಕಳುಹಿಸಿ ಎಂದು ಸರ್ಕಾರಕ್ಕೆ ತಿಳಿಸಿದ್ದಾರೆಯೆ? ಸರ್ಕಾರದ ಖಚಿತವಾದ ನೀತಿ ಏನು? ಗಂಡಸರಿಗೆ ಒಂದು ನೀತಿ ಇದೆಯ? ಮಹಿಳೆಯರಿಗೆ ಒಂದು ನೀತಿ ಇದೆಯೇ? ಯಾವುದಾದರೂ ಒಂದು ನಿರ್ದಿಷ್ಟವಾದ ನೀತಿ ಇರಬೇಕು.

ಶ್ರೀ ಎಂ.ಸಿ. ನಾಣಯ್ಯ:- ರಾಜ್ಯ ಉಚ್ಚನ್ಯಾಯಾಲಯದಲ್ಲಿ ಆ ನೀತಿ ಇದೆ, ಆದರೆ ಸರ್ಕಾರದಲ್ಲಿ ಅಂತಹ ಒಂದು ನೀತಿ ಇಲ್ಲ. ಆದರೆ ಜಿಲ್ಲಾ ನ್ಯಾಯಾಧೀಶರಾಗಿ ಕೆಲಸ ಮಾಡುತ್ತಾ ಇರತಕ್ಕಂಥವರು ಅಲ್ಲಿ One by promotion and another by recruitment.

ಈ ಜಿಲ್ಲಾ ನ್ಯಾಯಾಧೀಶರನ್ನು ಪ್ರಮೋಷನ್ ಮಾಡದಾಗ 40 ಪರ್‌ಸೆಂಟ್ ಇರುತ್ತದೆ. ಆ 40 ಪರ್‌ಸೆಂಟ್ ಬರುವಂಥ ಸಂದರ್ಭದಲ್ಲಿ, ಈಗಾಗಲೇ ಇಬ್ಬರು ಮಹಿಳಾ ನ್ಯಾಯಾ ಧೀಶರಿದ್ದಾರೆ. ಲೀಗಲ್ಲಾಗಿ ಈ ಕೆಲಸವನ್ನು ಕೂಡ ಉಚ್ಚನ್ಯಾಯಾಲಯ ಮಾಡಬೇಕಾಗುತ್ತದೆ.

ಅಧ್ಯಾಕ್ಷರು:- ಮಾನ್ಯ ಕಾನೂನು ಮಂತ್ರಿಗಳೆ, ಪ್ರಮಿಳನೇಸರ್ಗಿಯವರು ಕೇಳಿದರು, ಡೈರಕ್ಟ್ ರೆಕ್ರೂಟ್‌ಮೆಂಟ್ ಮಾಡಿಕೊಳ್ಳುವಂಥ ಸಂದಭದಲ್ಲಿ ಮಹಿಳೆಯರಿಗೆ ಕರ್ನಾಟಕದಲ್ಲಿ ಅವಕಾಶ ಇಲ್ಲದಿರುವುದರಿಂದ ರಾಷ್ಟ್ರದ ಎಲ್ಲಾ ಬೇರೆ ರಾಜ್ಯಗಳ ಉಚ್ಚ ನ್ಯಾಯಗಳಲ್ಲಿ ಇರುವ ರೀತಿ ತಾವು ತುಂಬಲಿಕ್ಕೆ ಪ್ರಯತ್ನ ಮಾಡುತ್ತೀರಾ, ಇದು ನಿರ್ದಿಷ್ಟವಾದ ಪ್ರಶ್ನೆ.

ಶ್ರೀ ಎಂ.ಸಿ. ನಾಣಯ್ಯ:- ಈಗ ಪ್ರಶ್ನೆ ಏನೆಂದರೆ, ಡೈರ್‌ಕ್ಟ ರಿಕ್ರೂಟ್‌ಮೆಂಟ್ ಮಾಡತಕ್ಕ ಸಂದರ್ಭದಲ್ಲಿ ಇದರ ವ್ಯಾಪ್ತಿ ಯಾರಿಗೆ ಬರುತ್ತದೆ ಅದು ಮುಖ್ಯ. ನಿಯಮಾವಳಿ ಪ್ರಕಾರ ಏನು ಕೆಲಸ ಮಾಡಬಹುದೋ ಅದನ್ನು ನಾವು ಮಾಡುತ್ತೇವೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಈ ನ್ಯಾಯಾಲಯದಲ್ಲಿರತಕ್ಕ ಕೇಸುಗಳನ್ನು ಸಂಪೂರ್ಣವಾಗಿ ಕ್ಲೋಸ್ ಮಾಡಲಿಕ್ಕೆ ಏನು ಕ್ರಮ ಜರುಗಿಸಿದ್ದೀರಿ? ಎನ್ನುವ ಪ್ರಶ್ನೆಗೆ ನ್ಯಾಯಾಧೀಶರ ಕೊರತೆಯಿಂದ ಈ ಹುದ್ದೆಗಳನ್ನು ಭರ್ತಿ ಮಾಡಲಾಗಿರುವುದಿಲ್ಲ ಎಂದು ಕಾನೂನು ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಏಕೆ ಈ ಕೊರತೆ ಆಯಿತು? ನ್ಯಾಯಾಧೀಶರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕಾದರೆ ವಿಶೇಷವಾದ ಭತ್ಯೆ ಕ್ವಾರ್ಟರ್ಸ್ ಮತ್ತಿತರ ಸವಲತ್ತುಗಳು ಕೊಡಲಿಕ್ಕೆ ಸರ್ಕಾರ ಏನಾದರೂ ತೀರ್ಮಾನ ಮಾಡಿದೆಯೇ? ವಕೀಲರು ನ್ಯಾಯಾಧೀಶರಾಗಲು ಏಕೆ ಮುಂದೆ ಬರುತ್ತಿಲ್ಲ? ಸರ್ಕಾರ ಇದರ ಬಗ್ಗೆ ಏನು ಚಿಂತನೆ ಮಾಡಿದೆ ತಿಳಿಸಬೇಕು. ಈ ಕೌಟುಂಬಿಕ ವ್ಯಾಜ್ಯಗಳು ಅಂದರೆ. ಸಾಮಾನ್ಯ ಜನರಲ್ಲಿ ಕೇವಲ ಗಂಡ ಹೆಂಡತಿಯರ ನಡುವೆ ನಡೆಯುವ ಜಗಳಗಳು ಎಂಬ ಭಾವನೆ ಇದೆ. ಅಣ್ಣ ತಮ್ಮಂದಿರ ಜಗಳ, ಅಪ್ಪ ಮಕ್ಕಳ ಜಗಳ, ಕುಟುಂಬಗಳ ಮಧ್ಯೆ ಇರತಕ್ಕೆ ವ್ಯಾಜ್ಯ ಇವುಗಳನ್ನು ಈಕೌಟುಂಬಿಕ

ನ್ಯಾಯಾಲಯದ ಒಂದು ಪರಿಮಿತಿಯಲ್ಲಿ ತರಲಿಕ್ಕೆ ಸಾಧ್ಯವಿಲ್ಲವೇ? ಈಗ ಖಾಲಿಯಿರುವ ನ್ಯಾಯಾಧೀಶರ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಅರ್ಜಿಗಳನ್ನು ಏನಾದರೂ ಕರೆದಿದ್ದೀರಾ? ಈ ಬಗ್ಗೆ ಯಾರಾದರೂ ಅರ್ಜಿಗಳನ್ನು ಹಾಕಿದ್ದಾರೆಯೇ? ಎಂಬುದನ್ನು ಮಾನ್ಯ ಕಾನೂನು ಮಂತ್ರಿಗಳು ಹೇಳಬೇಕು.

ಶ್ರೀ ಎಂ.ಸಿ. ನಾಣಯ್ಯ:- ಈಗ ಡಿಸ್ಟ್ರಿಕ್ಟ್ ಜಡ್ಜ್‌ಸ್ ಹುದ್ದೆಗಳು ಕೆಲವು ಖಾಲಿ ಇವೆ. ಅವುಗಳನ್ನೂ ತುಂಬಬೇಕಾಗುತ್ತದೆ.

ಅಧ್ಯಕ್ಷರು:- ಮಾನ್ಯ ಸದಸ್ಯರು ಏನು ಸಲಹೆ ಮಾಡುತ್ತಿದ್ದಾರೆ ಎಂದರೆ ಮ್ಯಾಜಿಸ್ಟ್ರೇಟ್ ಹುದ್ದೆಗಳಿಗೆ ಇನ್‌ಸೆಂಟೀವ್ಸ್ ಕಡಿಮೆ ಅದಕ್ಕೇ ಯಾರೂ ಅಡ್ವೋಕೇಟ್ಸ್‌ಆ ಹುದ್ದೆಗೆ ಬರುತ್ತಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ.

ಶ್ರೀ ಎಂ. ಸಿ. ನಾಣಯ್ಯ:- ಮಾನ್ಯ ಸದಸ್ಯರು ಮ್ಯಾಜಿಸ್ಟ್ರೇಟ್ ಹುದ್ದೆಗೆ ಇನ್‌ಸೆಂಟೀವ್ ಕಡಿಮೆಯಾಗಿದೆ. ಅದನ್ನು ಹೆಚ್ಚು ಮಾಡಿ ಎಂದು ಹೇಳಿದ್ದಾರೆ. ಅದು ಒಳ್ಳೆಯ ಸಲಹೆ. ಆ ಸಲಹೆಯನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ಅದನ್ನು ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು:- ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರ ಪ್ರಶ್ನೆ ಸಂಖ್ಯೆ 61 (21) ಮತ್ತು ಹೆಚ್.ಎನ್.ನಂಜೇಗೌಡರವರ ಪ್ರಶ್ನೆ ಸಂಖ್ಯೆ 69 (447) ಎರಡೂ ಪ್ರಶ್ನೆ ಒಂದೇ ರೀತಿ ಇರುವುದರಿಂದ, ಎರಡನ್ನೂ ಒಟ್ಟಿಗೆ ತೆಗೆದುಕೊಳ್ಳುತ್ತಿದ್ದೇನೆ.

ವಿಷಯ :- ವಿದೇಶೀ ಕಂಪನಿಗಳ ಮೂಲಕ ವಿದ್ಯುತ್ ಉತ್ಪಾದನೆ

ಚುಕ್ಕ ಗುರುತಿನ ಪ್ರಶ್ನೆ ಸಂಖ್ಯೆ 61(21) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಕಂಡಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

1. ವಿದ್ಯುತ್ ಉತ್ಪಾದನೆಗಾಗಿ ಯಾವ, ಯಾವವಿದೇಶಿ ಧರ್ಮಗಳ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ.
2. ಈ ತಿಳಿವಳಿಕೆ ಪತ್ರ: ಕರಾರಿನ ನಿಬಂಧನೆಗಳೇನು ಮತ್ತು ಈ ಧರ್ಮಗಳ ಮೇಲಿ ಬಂಡವಾಳ ಹೂಡುವುದರಿಂದ ಆಗುವ ಅಂದಾಜು ಉತ್ಪಾದನೆ ಎಷ್ಟು?

ಶ್ರೀ ಜೆ.ಹೆಚ್. ಪಟೇಲ್
ಉಪ ಮುಖ್ಯ ಮಂತ್ರಿಗಳು

1. ವಿದ್ಯುತ್ ಉತ್ಪಾದನೆಗಾಗಿ ನಾಲ್ಕು ವಿದೇಶಿ ಧರ್ಮಗಳ ಜೊತೆ ಒಡಂಬಡಿಕೆಗಳನ್ನು ಮಾಡಿರುವುದನ್ನು ಅನುಸರಿಸಲಾಗುತ್ತಿದೆ. ವಿದೇಶಿ ಸಂಸ್ಥೆಗಳ ವಿವರಗಳು ಈ ಕೆಳಕಂಡಂತಿವೆ: